KARNATAKA LEGISLATIVE ASSEMBLY RESEARCH AND REFERENCE BRANCH
PAPER CLIPPINGS
ಪತ್ರಿಕೆಯ ಹೆಸರು : NAME OF THE NEWS PAPER : ಕನ್ನಡ ಪ್ರಭ
ಇಲಾಖೆ / ವಿಷಯ : DEPARTMENT / SUBJECT :
ದಿನಾಂಕ : DATE : 20/07/2019

[illegible] | ಸ್ಪೀಕರ್ ಆದೇಶ ಸರಿಯಿಲ್ಲ, ನಡಾವಳಿ ನ್ಯಾಯಸಮ್ಮತವಾಗಿಲ್ಲ: ಆಚಾರ್ಯ | ಚುನಾವಣೆಗೆ ಸ್ಪರ್ಧಿಸುವಂತಿಲ್ಲ ಎಂದೂ ಹೇಳುವಂತಿಲ್ಲ

# ಸ್ಪೀಕರ್ ತೀರ್ಪು ಸುಪ್ರೀಂ ಆದೇಶದ ಉಲ್ಲಂಘನೆ: ಆಚಾರ್ಯ

• **ಕನ್ನಡಪ್ರಭ ವಾರ್ತೆ** ಬೆಂಗಳೂರು 21/7/19

ಮೂವರು ಅತೃಪ್ತ ಶಾಸಕರನ್ನು 15ನೇ ವಿಧಾನಸಭೆಯ ಸದಸ್ಯ ಸ್ಥಾನದಿಂದ ಅನರ್ಹಗೊಳಿಸಿ ಸಭಾಧ್ಯಕ್ಷರು ಆದೇಶ ಹೊರಡಿಸಿರುವುದು ಸುಪ್ರೀಂಕೋರ್ಟ್ ಮಧ್ಯಂತರ ಆದೇಶದ ಸ್ಪಷ್ಟ ಉಲ್ಲಂಘನೆ ಹಾಗೂ ಸಂವಿಧಾನಬಾಹಿರ ಕ್ರಮವಾಗಿದೆ ಎಂದು ರಾಜ್ಯದ ಮಾಜಿ ಅಡ್ವೋಕೇಟ್ ಜನರಲ್ ಹಾಗೂ ಹಿರಿಯ ವಕೀಲರಾದ ಬಿ.ವಿ.ಆಚಾರ್ಯ ಅಭಿಪ್ರಾಯಪಟ್ಟಿದ್ದಾರೆ.

ಸ್ಪೀಕರ್ ಅವರ ಆದೇಶವು ಹಲವು ಲೋಪ ದೋಷಗಳಿಂದ ಕೂಡಿರುವುದಲ್ಲದೆ ಅವರ ನಡಾವಳಿಯೂ ನ್ಯಾಯಸಮ್ಮತವಾಗಿಲ್ಲ ಎಂದು ಅಭಿಪ್ರಾಯಪಟ್ಟಿರುವ ಅವರು, ಸ್ಪೀಕರ್ ಅವರ ಆದೇಶದ ಕುರಿತು 'ಕನ್ನಡಪ್ರಭ' ಜೊತೆ ತಮ್ಮ ಅನಿಸಿಕೆಗಳನ್ನು ಹೀಗೆ ಹಂಚಿಕೊಂಡಿದ್ದಾರೆ. ಎಚ್.ಡಿ.ಕುಮಾರಸ್ವಾಮಿ ಅವರು ವಿಧಾನಸಭೆಯಲ್ಲಿ ವಿಶ್ವಾಸಮತ ನಿರ್ಣಯ ಮಂಡಿಸುವ ಮುನ್ನ ಅತೃಪ್ತ ಶಾಸಕರ ರಾಜೀನಾಮೆ ಹಾಗೂ ಅನರ್ಹತೆ ವಿಚಾರವನ್ನು ಪರಿಗಣಿಸುವ ವಿಚಾರದಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳಲು ಸಭಾಧ್ಯಕ್ಷ ರಮೇಶ್ ಕುಮಾರ್ ಅವರಿಗೆ ಸುಪ್ರೀಂಕೋರ್ಟ್ ಸೂಚಿಸಿತ್ತು. ನಂತರ ಜುಲೈ 18ರಂದು ವಿಶ್ವಾಸಮತ ಯಾಚನೆ ನಿಗದಿಯಾದ ಕಾರಣಕ್ಕೆ ಸುಪ್ರೀಂ ಕೋರ್ಟ್ ಮಧ್ಯಂತರ ಆದೇಶ ಮಾಡಿ, ಅತೃಪ್ತ ಶಾಸಕರ ರಾಜೀನಾಮೆಯನ್ನು ಮೊದಲು ಪರಿಗಣಿಸಬೇಕೋ ಅಥವಾ ಅನರ್ಹತೆ ದೂರನ್ನು ಮೊದಲು ಪರಿಗಣಿಸಬೇಕೋ? ಇಲ್ಲವೇ ಎರಡೂ ವಿಚಾರವನ್ನು ಒಟ್ಟಿಗೆ ಪರಿಗಣಿಸಬೇಕೋ ಎಂಬುದನ್ನು ಅತೃಪ್ತರ ಅರ್ಜಿಯ ಕುರಿತ ಮುಖ್ಯ ವಿಚಾರಣೆಯ ವೇಳೆ ನ್ಯಾಯಾಲಯವು ತೀರ್ಮಾನಿಸುತ್ತದೆ. ಅಲ್ಲಿಯವರೆಗೆ ಕೇವಲ ಅತೃಪ್ತರ ರಾಜೀನಾಮೆ ವಿಚಾರದ ಬಗ್ಗೆ ತೀರ್ಮಾನಿಸುವಂತೆ ಸ್ಪೀಕರ್‌ಗೆ ನಿರ್ದೇಶಿಸಿತ್ತು.

ಆ ಮಧ್ಯಂತರ ಆದೇಶದ ಪ್ರಕಾರ ಸ್ಪೀಕರ್ ಅವರಿಗೆ ಅತೃಪ್ತರ ವಿರುದ್ಧ ಅನರ್ಹತೆಯನ್ನು ತೀರ್ಮಾನಿಸಲು ಅವಕಾಶವಿರಲಿಲ್ಲ. ಹೀಗಾಗಿ ಮೂವರು ಶಾಸಕರನ್ನು ಅನರ್ಹಗೊಳಿಸಿ ಆದೇಶಹೊರಡಿಸಿರುವುದುಸುಪ್ರೀಂಕೋರ್ಟ್ ನಿರ್ದೇಶನದ ಸ್ಪಷ್ಟ ಉಲ್ಲಂಘನೆ. ಆದ್ದರಿಂದ ಅನರ್ಹತೆ ವಿಚಾರವನ್ನು ಸ್ಪೀಕರ್ ಪರಿಗಣಿಸಿದ್ದೇ ತಪ್ಪು.

ಇನ್ನೂ ಮೂವರನ್ನೂ 15ನೇ ವಿಧಾನಸಭೆ ಅವಧಿಯವರೆಗೂ ಅನರ್ಹತೆಗೊಳಿಸುವುದು ಹಾಗೂ 2023ರವರೆಗೂ ವಿಧಾನಸಭೆ ಚುನಾವಣೆಗೆ ಸ್ಪರ್ಧಿಸುವಂತಿಲ್ಲ ಎಂದು ಆದೇಶಿಸಿರುವುದು ಮತ್ತೊಂದು ತಪ್ಪು. ಸಂವಿಧಾನದ ಪರಿಚ್ಛೇದ 191 ಮತ್ತು ಪರಿಚ್ಛೇದ 164(ಬಿ) ಪ್ರಕಾರ ಅನರ್ಹಗೊಂಡ ಶಾಸಕ ತಕ್ಷಣವೇ ಸಚಿವ ಸ್ಥಾನ ಅಲಂಕರಿಸಲು ಅರ್ಹರಾಗುವುದಿಲ್ಲ. ಆದರೆ, ಅದೇ ವಿಧಾನಸಭೆ ಅವಧಿಯಲ್ಲಿ ನಡೆಯುವ ಚುನಾವಣೆಗೆ ಸ್ಪರ್ಧಿಸಲು ಮುಕ್ತ ಅವಕಾಶ ಹಾಗೂ ಸ್ವಾತಂತ್ರ್ಯ ಹೊಂದಿರುತ್ತಾರೆ. ಅನರ್ಹತೆಗೆ ಗುರಿಯಾದವರು ಯಾವುದೇ ಮರು ಚುನಾವಣೆ ಹಾಗೂ ಅವರದೇ ಕ್ಷೇತ್ರದಿಂದ ಅಥವಾ ಮತ್ತೊಂದು ಕ್ಷೇತ್ರದಿಂದ ಚುನಾವಣೆಗೆ ಸ್ಪರ್ಧಿಸಬಹುದು. ಚುನಾವಣೆಯಲ್ಲಿ ಮರು ಆಯ್ಕೆಯಾಗುವರೆಗೂ ಮಾತ್ರ ಸಚಿವರಾಗಲು ಅವಕಾಶವಿರುವುದಿಲ್ಲ ಅಷ್ಟೆ. ಹೀಗಾಗಿ ಮೂವರು ಶಾಸಕರು 2023ರವರೆಗೆ ಅನರ್ಹತೆ ಮಾಡಲಾಗಿದೆ ಎಂದು ತೀರ್ಪು ಬರೆದಿರುವುದು ಕಾನೂನಿಗೆ ವಿರೋಧವಾಗಿದೆ.

ಮೂರನೇ ವಿಚಾರವೆಂದರೆ ಸಭಾಧ್ಯಕ್ಷರ ಸ್ಥಾನ ಅರೆ ನ್ಯಾಯಿಕ ಸಂಸ್ಥೆಯಾಗಿರುತ್ತದೆ. ಅದರಂತೆ ಸಭಾಧ್ಯಕ್ಷರು ತಮ್ಮ ಯಾವುದೇ ತೀರ್ಪು ಓದಿ ಹೇಳಿ ಪ್ರಕಟಿಸಬೇಕು. ಬಳಿಕ ಆ ಆದೇಶದ ಪ್ರತಿಯನ್ನು ಪ್ರಕರಣದ ಕಕ್ಷಿದಾರರಿಗೆ ಮೊದಲು ತಲುಪಿಸಬೇಕು. ಆದರೆ, ತನ್ನ ಆದೇಶ ಸರಿಯಾಗಿದೆ ಎಂದು ಮಾಧ್ಯಮಗಳ ಸಮಾವೇಶದಲ್ಲಿ ಸಮರ್ಥನೆ ನೀಡುವುದಕ್ಕೆ ಅವಕಾಶವಿಲ್ಲ. ಹಾಗೆಯೇ, ಸಭಾಧ್ಯಕ್ಷರು ಅನರ್ಹಗೊಂಡವರ ವಿರುದ್ಧ ಪತ್ರಿಕಾಗೋಷ್ಠಿಯಲ್ಲಿ ಹಲವು ಆರೋಪ ಮಾಡಿದ್ದಾರೆ. ಇದು ಅವರು ಅನರ್ಹ ಶಾಸಕರ ಬಗ್ಗೆ ಪೂರ್ವಾಗ್ರಹ ಪೀಡಿತರಾಗಿದ್ದರು ಎಂಬುದನ್ನು ಸ್ಪಷ್ಟವಾಗಿ ತೋರಿಸುತ್ತದೆ.

## ನ್ಯಾಯಾಂಗ ವಿಮರ್ಶೆಗೊಳಪಡುತ್ತದೆ



ಸಭಾಧ್ಯಕ್ಷರ ಆದೇಶ ಪ್ರಶ್ನೆ ಮಾಡಿ ಅನರ್ಹಗೊಂಡ ಶಾಸಕರು ಸುಪ್ರೀಂಕೋರ್ಟ್ ಇಲ್ಲವೇ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಬಹುದು. ಸಭಾಧ್ಯಕ್ಷರ ಆದೇಶವನ್ನು ನ್ಯಾಯಾಂಗ ವಿಮರ್ಶೆಗೊಳಪಡಿಸುವ ಅಧಿಕಾರವನ್ನು ಈ ಎರಡೂ ಕೋರ್ಟ್‌ಗಳು ಹೊಂದಿವೆ ಎಂದು ಬಿ.ವಿ.ಆಚಾರ್ಯ ಅಭಿಪ್ರಾಯಪಟ್ಟರು.